# ಗೋ ವಿಶ್ವ

Cow Universe — गौ विश्व

ಸರ್ವಧಾರಿ ಸಂವತ್ಸರ | ಮಾಘ | ಜನವರಿ ೨೦೦೯ | ಸಂಪುಟ–೩ | ಸಂಚಿಕೆ–೧

ಗುರುವಾಣಿ

## ಪ್ರೇಮಮಯ ರಾಷ್ಟ್ರ, ಕನಿಕರಿಸುವ ಸ್ಥಿತಿ, ಮೇಲೆತ್ತುವ ಪ್ರಯತ್ನ



ಬದುಕಿನ ನೆಮ್ಮದಿಗೆ, ಸುಂದರ ರಾಷ್ಟ್ರ ನಿರ್ಮಾಣಕ್ಕೆ ಪ್ರೀತಿ ಬೇಕು. ಆ ಪ್ರೀತಿ ಪ್ರೇಮವೆಂಬ ಲಾಭದ ಹೊರತಾಗಿ ಮತ್ತೇನನ್ನೂ ಬಯಸಬಾರದು – ಇದು ನಮ್ಮೆಲ್ಲರಿಗಾಗಿ ರೂಪುಗೊಂಡ ಆದರ್ಶ.

ಅದನ್ನೇ ದೂರದ ನಾಡಿನ ದಾರ್ಶನಿಕನೊಬ್ಬ ಸುಂದರವಾಗಿ, ಮನ ಮಿಡಿಸುವ ರೀತಿಯಲ್ಲಿ ಬಿಚ್ಚಿಡುತ್ತಾನೆ–

ನಿಮ್ಮ ಮಕ್ಕಳು ನಿಮ್ಮ ಮಕ್ಕಳಲ್ಲ  
ಜೀವದ ಸ್ವಪ್ರೇಮದ ಪುತ್ರ ಪುತ್ರಿಯರು ಅವು  
ಅವು ನಿಮ್ಮ ಮೂಲಕ ಬಂದಿವೆಯೇ ಹೊರತು ನಿಮ್ಮಿಂದಲ್ಲ  
ನಿಮ್ಮ ಜತೆ ಅವು ಇರುವುದಾದರೂ ನಿಮಗೆ ಸೇರಿದ್ದಲ್ಲ  
ನಿಮ್ಮ ಪ್ರೀತಿಯನ್ನು ನೀವು ಅವುಗಳಿಗೆ ನೀಡಬಹುದು  
ಆದರೆ ನಿಮ್ಮ ಆಲೋಚನೆಗಳನ್ನಲ್ಲ  
ಏಕೆಂದರೆ ಅವರಿಗೆ ಅವರದೇ ಸ್ವಂತ ಆಲೋಚನೆಗಳುಂಟು  
ಅವರ ದೇಹಗಳಿಗೆ ನೀನು ಮನೆಯಾಗಿರಬಹುದೇ ಹೊರತು ಆತ್ಮಗಳಿಗಲ್ಲ  
ಏಕೆಂದರೆ ಅವರ ಆತ್ಮಗಳು ನಾಳೆಯ ಮನೆಯಲ್ಲಿ ನೆಲೆಸುತ್ತವೆ  
ಎಲ್ಲಿಗೆ ನೀವು ಕನಸಿನಲ್ಲೂ ಹೋಗಲಾರಿರೋ ಅಲ್ಲಿ ಅವರಂತಿರಲು ನೀವು ಪ್ರಯತ್ನಿಸಬಹುದು  
ಆದರೆ ಅವರನ್ನು ನಿಮ್ಮಂತೆ ಮಾಡಲು ಪ್ರಯತ್ನಿಸದಿರಿ  
ಏಕೆಂದರೆ ಜೀವ ಹಿಮ್ಮುಖವಾಗಿ ಹರಿಯುವುದೂ ಇಲ್ಲ  
ನಿನ್ನೆಯ ಜತೆ ತಂಗುವುದೂ ಇಲ್ಲ  
ನಿಮ್ಮ ಮಕ್ಕಳು, ಜೀವಂತ ಬಾಣಗಳಂತೆ ಚಿಮ್ಮಲು ಇರುವ ಬಿಲ್ಲುಗಳು ನೀವು  
ಅನಂತದ ಪಥದ ಮೇಲೆ ತನ್ನ ಗುರಿಯನ್ನು ಬಿಲ್ಲುಗಾರ ಗಮನಿಸುತ್ತಾನೆ  
ಅವನ ಶಕ್ತಿಯಿಂದ ನಿಮ್ಮನ್ನು ಬಾಗಿಸುತ್ತಾನೆ, ಅವನ ಬಾಣಗಳು ವೇಗವಾಗಿ ಬಹುದೂರ ಹೋಗುವಂತೆ  
ಆ ಬಿಲ್ಲುಗಾರನ ಕೈಯಲ್ಲಿ ನಿಮ್ಮ ಬಾಗುವಿಕೆ ಸಂತಸಮಯವಾಗಿರಲಿ  
ಏಕೆಂದರೆ ಹಾರುವ ಅಂಬನ್ನು ಅವನು ಪ್ರೀತಿಸಿದಂತೆಯೇ ದೃಢವಾದ ಬಿಲ್ಲನ್ನೂ ಆತ ಪ್ರೀತಿಸುತ್ತಾನೆ

ಈ ಮಾತುಗಳು ಗೋವನ್ನು ಆಧರಿಸಿ ನೆಮ್ಮದಿಯ ನಾಡನ್ನು ಕಟ್ಟಲು ಹೊರಟ ನಮಗೆ ಸಹಜತೆಯ ದರ್ಶನ ಮಾಡಿಸುತ್ತದೆ. ನಮಗೆಲ್ಲ ಬದುಕುವ ಹಕ್ಕು ಹೇಗಿದೆಯೋ, ಅಂತೆಯೇ ಗೋವಿಗೆ, ಉಳಿದ ಪಶು–ಪಕ್ಷಿ–ಪ್ರಾಣಿಗಳಿಗೆ ಬದುಕಿ–ಬಾಳುವ ಹಕ್ಕಿದೆ ಎಂಬುದನ್ನು ಎತ್ತಿ ಹಿಡಿಯುತ್ತದೆ. ಅದನ್ನು ಸಾದ್ಯಂತವಾಗಿ ಭಾವಿಸಲು ಈ ನೋಟ ಸ್ಫೂರ್ತಿ ಕೊಡುತ್ತದೆ.

ಮೇಲ್ಕಾಣಿಸಿದ ನೋಟದಂತೆ ನಾಡಿನ ಪರಿಸ್ಥಿತಿ ಇಲ್ಲದಾದಾಗ, ಬಲ್ಲವರು ಎಷ್ಟೆಷ್ಟು ರೀತಿಯಲ್ಲಿ ಕನಿಕರಿಸಬಹುದು ಮತ್ತು ಬಿದ್ದ ಪ್ರಜೆಗಳನ್ನು ಎಲ್ಲೆಲ್ಲಿಂದ ಮೇಲೆತ್ತಬೇಕಾಗುವುದು ಎಂಬುದನ್ನು ಆ ದಾರ್ಶನಿಕ ತನ್ನ ಸುಂದರ ಸಾಲುಗಳಲ್ಲಿ ಹಿಡಿದಿಡುತ್ತಾನೆ.

### ಹೂರಣ

ಗುರುವಾಣಿ  
ಪ್ರಶ್ನೋತ್ತರ  
ಮಾಸದ ಗೋವು: ವೆಚ್ಚೂರ್  
ಯೋಗ, ಗೋವು ಮತ್ತು ಗ್ರಾಮ ಪುನರ್ರಚನೆಯ ಬಗೆಗಿನ ಮೊದಲ ಅಂತಾರಾಷ್ಟ್ರೀಯ ಸಮ್ಮೇಳನ  
ಸುದ್ದಿ ಸಮಾಚಾರ –ಕೊಂಬುಮೇಳ

ಪ್ರಕಾಶನ: IT4COW ಸಂಘಟನೆ  
groups.yahoo.com/group/IT4COW  
ಅಂತರಜಾಲ ತಾಣ: vishwagou.org  
ಸಂಪರ್ಕ: govishva@gmail.com



ಯಾವ ರಾಷ್ಟ್ರದಲ್ಲಿ ನಂಬಿಕೆಗಳೇ ತುಂಬಿದ್ದು ಧರ್ಮ ಶೂನ್ಯವಾಗಿದೆಯೋ ಅಂಥ ರಾಷ್ಟ್ರವನ್ನು ಕನಿಕರಿಸಿ

ಯಾವ ರಾಷ್ಟ್ರ ತಾನು ನೇಯದ ಬಟ್ಟೆಯನ್ನು ಉಡುತ್ತದೆಯೋ, ತಾನು ಬೆಳೆಯದ ಆಹಾರವನ್ನು ತಿನ್ನುತ್ತದೆಯೋ ಅದನ್ನು ಕನಿಕರಿಸಿ

ಯಾವ ರಾಷ್ಟ್ರ ಪೀಡಕರನ್ನು ಧೀರ ಶೂರ ಎಂದು ಹೊಗಳುತ್ತದೆಯೋ, ಹೊಳೆಯುವ ಆಕ್ರಮಣಕಾರರನ್ನು ಉದಾರಿ ಎಂದು ಹೊಗಳುತ್ತದೆಯೋ ಅದನ್ನು ಕನಿಕರಿಸಿ

ಯಾವ ರಾಷ್ಟ್ರ ಒಂದು ಭಾವೋದ್ರೇಕವನ್ನು ಕನಸಿನಲ್ಲಿ ಕನಿಕರಿಸಿ, ಎಚ್ಚರದ ಸ್ಥಿತಿಯಲ್ಲಿ ಅದಕ್ಕೆ ವಶವಾಗುತ್ತದೆಯೋ ಅದನ್ನು ಕನಿಕರಿಸಿ

ಸ್ಮಶಾನ ಯಾತ್ರೆಯಲ್ಲಲ್ಲದೇ ಬೇರೆ ಸಮಯದಲ್ಲಿ ತನ್ನ ದನಿಯನ್ನು ಎತ್ತರಿಸದ, ತನ್ನ ಅವಶೇಷಗಳನ್ನಲ್ಲದ ಬೇರೇನನ್ನೂ ಹಾಡಿ ಹೊಗಳದ, ತನ್ನ ಕತ್ತನ್ನು ಕತ್ತಿ ಮತ್ತು ವಧೆಯ ಪೀಠದ ನಡುವೆ ಇಟ್ಟಾಗಲಲ್ಲದೆ ದಂಗೆಯೇಳದ ರಾಷ್ಟ್ರವನ್ನು ಕನಿಕರಿಸಿ

ಯಾವ ರಾಷ್ಟ್ರದಲ್ಲಿ ರಾಜತಂತ್ರಜ್ಞ ನರಿಯೋ, ತತ್ತ್ವಶಾಸ್ತ್ರಜ್ಞ ಯಕ್ಷಿಣಿಗಾರನೋ, ಕಲೆ ತೇಪೆ ಹಾಕುವುದೋ ಅಥವಾ ಅನುಕರಿಸುವುದೋ ಅದನ್ನು ಕನಿಕರಿಸಿ

ಹೊಸ ರಾಜನನ್ನು ಬಾಜಾ ಬಜಂತ್ರಿಯಿಂದ ಸ್ವಾಗತಿಸಿ, ಹಳೆಯವನನ್ನು ಕೂಗಿ ಕಿರುಚಿ ಓಡಿಸುವ, ಮತ್ತೆ ಹೊಸಬನನ್ನು ಬಾಜಾ ಬಜಂತ್ರಿಯಿಂದ ಸ್ವಾಗತಿಸುವ ರಾಷ್ಟ್ರವನ್ನು ಕನಿಕರಿಸಿ

ಯಾವ ರಾಷ್ಟ್ರದಲ್ಲಿ ಸಂತರು ವಯೋವೃದ್ಧರಾಗಿ ಮೌನಿಗಳಾಗಿದ್ದಾರೋ, ಅಲ್ಲಿನ ಸಶಕ್ತರು ಇನ್ನೂ ತೊಟ್ಟಿಲಲ್ಲಿದ್ದಾರೋ ಅಂಥದನ್ನು ಕನಿಕರಿಸಿ

ಯಾವ ರಾಷ್ಟ್ರ ಚೂರು ಚೂರಾಗಿ ಒಡೆದು ಹೋಗಿ, ಪ್ರತಿಯೊಂದು ಚೂರು ತಾನೇ ಒಂದು ರಾಷ್ಟ್ರ ಎಂದು ಭಾವಿಸಿದೆಯೋ ಅಂಥ ರಾಷ್ಟ್ರವನ್ನು ಕನಿಕರಿಸಿ

ಪ್ರಸ್ತುತ, ನಮ್ಮ ರಾಷ್ಟ್ರದ ಪರಿಸ್ಥಿತಿಯೂ ಕನಿಕರಿಸಲು ಯೋಗ್ಯವಾಗಿದೆ. ಬಲ್ಲ ಪ್ರತಿಯೊಬ್ಬರೂ ಅದನ್ನು ಸುಧಾರಿಸಲು ತಮ್ಮನ್ನು ತಾವು ಕೊಟ್ಟುಕೊಳ್ಳಬೇಕು.

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

---

**ಗೋ ಮಹಿಮೆ ಅಪಾರ**
**ಹಣಕ್ಕೆ ಮಾಡದಿರಿ ಸಂಹಾರ**

**ಪುಣ್ಯಕೋಟಿ ಗೋವು ಜ್ಞಾನ**
**ಕೊಂದು ಕೋಟಿಗಳಿಸುವವ ಹೀನ**

## ಪ್ರಶ್ನೋತ್ತರ

ಪ್ರ: ಭಾರತೀಯ ತಳಿ ಗೋವುಗಳಿಗೂ ಹಾಗೂ ವಿದೇಶಿ ತಳಿ ಗೋವುಗಳಿಗೂ ಏನು ವ್ಯತ್ಯಾಸಗಳಿವೆ?

ಉ: ವಿದೇಶಿ ತಳಿ ಹಸುಗಳು ಚಳಿ ಹೆಚ್ಚಾಗಿರುವ ದೇಶಗಳಲ್ಲಿ ಸೃಷ್ಟಿಯಾದವು. ಅವಕ್ಕೆ ಮೈಮೇಲೆ ಉದ್ದ ಕೂದಲು, ಗಿಡ್ಡಬಾಲ, ಬೆವರು ಗ್ರಂಥಿಗಳು ಕಡಿಮೆ. ಭುಜ ಇಲ್ಲ. ರೋಗ ನಿರೋಧಕ ಶಕ್ತಿ ಕಡಿಮೆ. ವಿಚಿತ್ರವಾಗಿ ಕೂಗುತ್ತವೆ. ಹಾಲು ಮತ್ತು ಮಾಂಸಕ್ಕಾಗಿ ಮಾತ್ರ ತಯಾರಾದವು. ಭಾರತೀಯ ತಳಿಗಳು ನಮ್ಮ ಉಷ್ಣ ವಾತಾವರಣದಲ್ಲಿಯೇ ಹುಟ್ಟಿ ಬೆಳೆದವು. ಸೆಖೆ ತಡೆದುಕೊಳ್ಳುತ್ತವೆ. ಬೆವರು ಗ್ರಂಥಿಗಳು ಹೆಚ್ಚು. ಗಿಡ್ಡಕೂದಲು, ದೊಡ್ಡ ಗಂಗೆ ದೊಗಲು, ದೊಡ್ಡ ಭುಜ ಮತ್ತು ಬಾಲ. ಸುಂದರವಾಗಿ ಅಂಬಾ ಎನ್ನುತ್ತವೆ. ಕೆಲಸಗಾರ ಪ್ರಾಣಿಗಳು.

ಪ್ರ: ದೇಸೀ ತಳಿಗಳು ಹೆಚ್ಚು ಹಾಲು ಕೊಡುವಂತೆ ಮಾಡುವುದು ಸಾದ್ಯವಿಲ್ಲವೇ?

ಉ: ಏಕೆ ಸಾದ್ಯವಿಲ್ಲ. ಖಂಡಿತಾ ಸಾದ್ಯವಿದೆ. ಸಿಂಧಿ ಹಾಗೂ ಸಾಹಿವಾಲ್ ತಳಿಯ ಹಸುಗಳು ಇಂದಿಗೂ ದಿನಕ್ಕೆ ೨೫ ಲೀಟರ್ ಹಾಲು ಕೊಡುತ್ತವೆ. ದೇವನಿ, ಗಿರ್, ಕೃಷ್ಣಾತೀರ ಇವು ಸರಾಸರಿ ೧೦ ಲೀಟರ್ ಕರೆಯುತ್ತವೆ. ಇಂಥ ತಳಿಗಳನ್ನು ಸಾಕಾರಗೊಳಿಸಿ ಉತ್ತಮ ಆಹಾರ ನೀಡುವುದರ ಮೂಲಕ ಅಧಿಕ ಹಾಲು ನೀಡುವ ದೇಸೀ ತಳಿಗಳನ್ನು ಅಭಿವೃದ್ಧಿಪಡಿಸಬಹುದು. ಇದಕ್ಕೆ ಅಗತ್ಯ, ವಿದೇಶದ್ದೆಲ್ಲ ಉತ್ತಮ ಎಂಬ ಗುಲಾಮಿ ಮನೋಭಾವ ಬಿಡುವುದು ಹಾಗೂ ಸ್ವದೇಶಿಯಲ್ಲಿ ಅಭಿಮಾನ ಬೆಳೆಸಿಕೊಳ್ಳುವುದು.

**– ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

ಮಾಸದ ಗೋವು

# ವೇಚೂರು

**ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು. ಅಪರೂಪದ ಔಷಧೀಯ ಗುಣಗಳನ್ನು ಹೊಂದಿರುವ ಅತಿ ಪುಟ್ಟ ಗೋವು ವೇಚೂರು. ವಿನಾಶದ ಅಂಚಿನಲ್ಲಿರುವ ತಳಿ.**

ಈ ಬಾರಿಯ ಮಾಸದ ಗೋವಿನ ದುರಂತ ಕಥಾನಾಯಕಿ ವೇಚೂರು ಎಂಬ ಜಗತ್ತಿನ ಅತ್ಯಂತ ಗಿಡ್ಡ ತಳಿ. ಅಪರೂಪದ ಔಷಧೀಯ ಗುಣಗಳನ್ನು ಹೊಂದಿದ ವೇಚೂರ್, ಇಂದು ತನ್ನ ವಿನಾಶಗೀತೆಯ ಕೊನೆಯ ಚರಣಗಳನ್ನು ಹಾಡುತ್ತಿದೆ. ಹೀಗೇಕೆ ಎಂಬ ಉತ್ತರವಿಲ್ಲದ ಪ್ರಶ್ನೆ, ಕಳಕಳಿ ನಿಮ್ಮ ಮನಸಿನಲ್ಲಿ ಮೂಡಲು ಪೂರಕವಾಗುವಂತೆ ಒಂದಿಷ್ಟು ಮಾಹಿತಿ.

ವೇಚೂರ್‌ನ ತವರುಮನೆ ಕೊಟ್ಟಾಯಾಮ್ ಜಿಲ್ಲೆಯ ವೈಕಂ ಎಂಬ ಪುಟ್ಟಹಳ್ಳಿ. ಭಾರತ ಉಪಖಂಡದ ಈ ಕೊನೆಯ ಊರು ಅತಿಯಾದ ಮಳೆಗೆ, ಅಷ್ಟೇ ಸೆಖೆಗೆ ಪ್ರಸಿದ್ಧ. ಇಲ್ಲಿನ ಮುಖ್ಯ ಸಾರಿಗೆ ದೋಣಿ. ಪಕ್ಕದ ಮನೆಗೆ ಹೋಗಲೂ ದೋಣಿಯೇ! ಮೇಯಲು ದನಗಳು ದೋಣಿಯಲ್ಲಿ ಹೊಗಬೇಕಾದ ಪರಿಸ್ಥಿತಿ! ಹೀಗಾಗಿ ಒಂದು ಪುಟ್ಟ ತಳಿಯ ಅನ್ವೇಷಣೆ ಪ್ರಾರಂಭವಾಗಿ ಅಂತಿಮವಾಗಿ ಸಿಕ್ಕಿದ್ದು ವೇಚೂರ್ ಎಂಬ ಕುಬ್ಜಸುಂದರಿ. ಆಕಾರದಲ್ಲಿ ವೆಚೂರ್ ಚಿಕ್ಕದಾದರೂ ಶಕ್ತಿಯಲ್ಲಿ ಮಾತ್ರ ಇದು ಇನ್ನಾವುದೆ ಕೆಲಸಗಾರ ತಳಿಯೊಂದಿಗೂ ಸಮಗೌರವ ಪಡೆಯಬಲ್ಲಂತಹದ್ದು.



ವೆಚ್ಚೂರ್, ಕೇರಳ

ಅತ್ಯಂತ ಪುಟ್ಟ ತಳಿ, ಕಡಿಮೆ ಆಹಾರದ ಅವಶ್ಯಕತೆ, ಯಾವುದೇ ಹವಾಗುಣಕ್ಕೂ ಹೊಂದಿಕೊಳ್ಳಬಲ್ಲ ಸಹಿಷ್ಣುತೆ, ಅಪರೂಪದ ರೋಗ ನಿರೋಧಕ ಶಕ್ತಿ, ಚರ್ಮದಲ್ಲಿನ ಕೀಟನಿರೋಧಕತೆ ಇತ್ಯಾದಿಗಳು ವೇಚೂರು ತಳಿಯ ಉತ್ಪ್ರೇಕ್ಷೆಯಲ್ಲದ ಗುಣಾವಳಿಗಳು.

ಉದ್ದ ಬಾಲ, ನಮ್ಮ ಮಲೆನಾಡು ಗಿಡ್ಡ ತಳಿಗಿಂತ ಚಿಕ್ಕದಾದ ಬಲಿಷ್ಠ ಕೋಡು, ಕೆಂಬಣ್ಣ, ೮೦ರಿಂದ ನೂರು ಅಂಗುಲದಷ್ಟು ಎತ್ತರ ಇತ್ಯಾದಿ ಇತ್ಯಾದಿ ವೇಚೂರಿನ ದೈಹಿಕ ಲಕ್ಷಣಗಳು.

ಇವೆಲ್ಲಕ್ಕಿಂತ ಮುಖ್ಯವಾದ ಗುಣವೊಂದನ್ನು ಹೇಳದಿದ್ದರೆ ವೇಚೂರಿನ ಬಗ್ಗೆ ಹೇಳಿದಂತೇ ಆಗುವುದಿಲ್ಲ. ಅದು ವೇಚೂರ್ ತಳಿಯ ಹಾಲಿನಲ್ಲಿರುವ ಔಷಧೀಯ ಗುಣಗಳ ಬಗ್ಗೆ. ಅನೇಕ ಖಾಯಿಲೆಗಳಿಗೆ ವೇಚೂರಿನ ಹಾಲನ್ನು ಕೇರಳದ ಪರಂಪರಾನುಗತ ಆಯುರ್ವೇದ ವೈದ್ಯರು ಸಲಹೆ ಮಾಡುತ್ತಾರೆ. ಇದರ ಪ್ರಸಿದ್ಧಿ ಎಷ್ಟೆಂದರೆ, ತಿರುವಾಂಕೂರಿನ ಶ್ರೀಮನ್ಮಾಹಾರಾಜ ಬಲರಾಮ ವರ್ಮನಿಗೆ ಆಸ್ಥಾನವೈದ್ಯರು ಕಪ್ಪು ವೇಚೂರಿನ ಹಾಲು ಕುಡಿಯಲು ಸೂಚಿಸಿದರೆಂದೂ, ಅದಕ್ಕಾಗಿ ಭಟರು ವೇಚೂರ್ ತಳಿಗಳನ್ನು ಕೊಂಡೊಯ್ಯಲು ತಿರುವಾಂಕೂರಿನಿಂದ ಹುಡುಕುತ್ತಾ ಬಂದರೆಂದು The state Manual of Travancoreನಲ್ಲಿ ಆಂಗ್ಲರೇ ಉಲ್ಲೇಖಿಸುವಷ್ಟು.



**ಅತಿ ಗಿಡ್ಡ ತಳಿ ವೇಚೂರ್**

ಈ ಕಥೆಗೆ ದುರಂತದೆಡೆಗಿನ ತಿರುವು ಬಂದದ್ದು ಹತ್ತೊಂಭತ್ತು ನೂರಾ ಐವತ್ತರಲ್ಲಿ ಕೇರಳ ಸರ್ಕಾರ ದೂರದರ್ಶಿತ್ವವಿಲ್ಲದ ತಳಿ ಅಭಿವೃದ್ಧಿ ನೀತಿಯೊಂದನ್ನು ಜಾರಿಗೆ ತಂದಾಗ. ಪರಿಸ್ಥಿತಿ ವಿಕೋಪಕ್ಕೆ ಹೋದದ್ದು ಕೇರಳ ಹೈನುಗಾರಿಕಾ ಖಾಯಿದೆ ೧೯೬೧ ರಿಂದ. ಆ ಖಾಯಿದೆಯ ಪ್ರಕಾರ ಯಾರೊಬ್ಬರೂ ಬೀಜದ ಹೋರಿಯನ್ನು ಪರವಾನಿಗೆ ಇಲ್ಲದೇ ಸಾಕುವಂತಿಲ್ಲ. ಈ ಖಾಯಿದೆ ವೇಚೂರ್ ಸೇರಿದಂತೆ ಅಪರೂಪದ ಎಲ್ಲ ದೇಶಿಯ ತಳಿಗಳಿಗೆ ಮಾರಕವಾಯಿತು.

(5ನೆಯ ಪುಟಕ್ಕೆ)

**ಮೂಲ : ವೆಚ್ಚೂರ್ – ಕೇರಳ.**
**ವಿಭಾಗ : ಗಿಡ್ಡ ತಳಿ.**
**ಕೇರಳ ಕೃಷಿ ವಿಶ್ವವಿದ್ಯಾಲಯದವರು ವಿನಾಶದಂಚಿನಿಂದ ಸಂರಕ್ಷಿಸಿದ ತಳಿ. ಒಟ್ಟಾರೆ ಒಂದು ನೂರು ಸಂಖ್ಯೆಯಲ್ಲಿ ಇರಬಹುದಷ್ಟೆ, ಅತ್ಯಂತ ಗಿಡ್ಡ ತಳಿ.**
**ಬಣ್ಣ : ತಿಳಿ ಕೆಂಪು, ಕಪ್ಪು, ಬಿಳಿ, ಬೂದು.**
**ಮುಖ : ನೀಳವಾಗಿರುತ್ತದೆ.**
**ಕೊಂಬು : ಸಣ್ಣದು, ಎದುರಿಗೆ ಬಾಗಿರುತ್ತದೆ.**
**ಬಾಲ : ಉದ್ದ.**

# ಯೋಗ, ಗೋವು ಮತ್ತು ಗ್ರಾಮ ಪುನರ್ರಚನೆಯ ಬಗೆಗಿನ ಮೊದಲ ಅಂತಾರಾಷ್ಟ್ರೀಯ ಸಮ್ಮೇಳನದ ವರದಿ

ಕಳೆದ ಡಿ.೨೮ ರಿಂದ ೩೦ರ ವರೆಗೆ ಬೆಂಗಳೂರಿಗೆ ಸಮೀಪದಲ್ಲಿರುವ ಜಿಗಣಿಯ ಪ್ರಶಾಂತಿ ಕುಟೀರದಲ್ಲಿ ನಡೆಯಿತು. ವಿಶ್ವ ಮಂಗಲ ಗೋ ಗ್ರಾಮ ಯಾತ್ರಾ ಸಮಿತಿ, ಬೆಂಗಳೂರಿನ ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ ಮತ್ತು ನಾಗಪುರದ ಗೋ ವಿಜ್ಞಾನ ಅನುಸಂಧಾನ ಕೇಂದ್ರ ಜಂಟಿಯಾಗಿ ಸಮ್ಮೇಳನವನ್ನು ಆಯೋಜಿಸಿದ್ದವು.

ಪಂಚಗವ್ಯದ ಬಗೆಗೆ ಸಂಶೋಧನೆ ಸಮ್ಮೇಳನದ ಪ್ರಧಾನ ವಿಷಯವಾಗಿತ್ತು. ಅಲ್ಲಿ ವಿಚಾರ ಗೋಷ್ಠಿಗಳನ್ನು ಮುಖ್ಯವಾಗಿ ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿತ್ತು.

ಗೋವು ಮತ್ತು ಪಂಚಗವ್ಯ: ಗೋಮಯ, ಗೋಮೂತ್ರ, ಹಾಲು, ಗೋವು ಮತ್ತು ಗಿಣ್ಣು, ಬೆಣ್ಣೆ ಮತ್ತು ತುಪ್ಪ.

ಗೋವು ಮತ್ತು ಆರೋಗ್ಯ: ದೈಹಿಕ ಆರೋಗ್ಯ, ಮಾನಸಿಕ ಸ್ವಾಸ್ಥ್ಯ, ಸಾಮಾಜಿಕ ಮತ್ತು ಆಧ್ಯಾತ್ಮಿಕ ಸುಸ್ಥಿತಿ.

ಗೋವು ಮತ್ತು ಆರ್ಥಿಕತೆ: ಸ್ವಾವಲಂಬಿ ಗೋವು, ಗೋವು ಆರ್ಥಿಕ ಬಂಡವಾಳವನ್ನು, ಗೋ ಆಧಾರಿತ ಕೃಷಿ.

ಗೋವು ಮತ್ತು ಇನ್ನುಳಿದ ಉಪಯುಕ್ತತೆ : ಗೋವು ಮತ್ತು ಸಂಸ್ಕೃತಿ, ಗೋವು ಮತ್ತು ತಂತ್ರಜ್ಞಾನ, ಗೋವು ಮತ್ತು ವಿಭಿನ್ನ ಪ್ರಯೋಜನಗಳು, ಗವ್ಯೋತ್ಪನ್ನ ಮಳಿಗೆಗಳು.




ಗೋಷ್ಠಿಗಳಲ್ಲಿ ಆಸಕ್ತರಾದ ಒಂದೈವತ್ತು ಮಂದಿ ಪಾಲ್ಗೊಳ್ಳುತ್ತಿದ್ದುದು ಸಮ್ಮೇಳನ ಯಶಸ್ವಿಯಾಗಿ ನಡೆಯಲು ಕಾರಣವಾಯಿತು. ಉತ್ತರ ಭಾರತದ ಆಸಕ್ತರೂ ಪಾಲ್ಗೊಂಡಿದ್ದು ವಿಶೇಷವಾಗಿತ್ತು.

ಪ್ರಬಂಧ ಮಂಡಿಸಲು ಶ್ರೀಲಂಕಾ, ಚೀನಾ, ಜಪಾನ್, ನ್ಯೂಜಿಲೆಂಡಿನಿಂದಲೂ ತಜ್ಞರು ಆಗಮಿಸಿದ್ದರು. ಒಟ್ಟು ೩೫ ಪ್ರಬಂಧಗಳನ್ನು ಮಂಡಿಸಲಾಯಿತು. ಪ್ರಬಂಧ ಮಂಡನೆಯಲ್ಲಿ ನಮ್ಮವರೂ ಇದ್ದರು. ಒಬ್ಬರು ಕಾಸರಗೋಡಿನ ಕಿಮ್ಸ್‌ನ ಡಾ. ಸತ್ಯಶಂಕರ ವರ್ಮುಡಿ. ಇವರು ಮಂಡಿಸಿದ ವಿಷಯ ಕ್ಯಾನ್ಸರ್ ಚಿಕಿತ್ಸೆಯಲ್ಲಿ ಗೋಮೂತ್ರ-ಅರ್ಕ. ಮತ್ತೊಬ್ಬರು ಮೈಸೂರಿನ ಪಂಚಗವ್ಯ ಆಯುರ್ವೇದ ರಿಸರ್ಚ್ ಸೆಂಟರ್‌ನ ನಾರಾಯಣ ಸ್ವಾಮೀಜಿ. ಇವರು ಪಂಚಗವ್ಯದ ಬಹುಮುಖ ಉಪಯೋಗಗಳು ಎಂಬ ಪ್ರಬಂಧವನ್ನು ಮಂಡಿಸಿದರು. ಮಂಡನೆಯಾದ ಪ್ರಬಂಧಗಳು ತಳಮಟ್ಟದ ಅಧ್ಯಯನವನ್ನು ಬಿಂಬಿಸುತ್ತಿದ್ದವು. ಹಾಗೆ ಒದಗಿದ ಮಾಹಿತಿ ಅಮೂಲ್ಯವಾಗಿತ್ತು.




ಸಮ್ಮೇಳನದ ಉದ್ಘಾಟನೆ ಡಿ.೨೮ರ ಬೆಳಗ್ಗೆ ೧೦ ಗಂಟೆಗೆ ನಡೆಯಿತು. ಸಮಾರಂಭ ಗೋಪೂಜೆಯೊಂದಿಗೆ ಆರಂಭವಾಯಿತು. ಸಮಾರಂಭದಲ್ಲಿ ಶ್ರೀರಾಮಚಂದ್ರಾಪುರಮಠದ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿಯವರ ದಿವ್ಯ ಸಾನ್ನಿಧ್ಯವಿತ್ತು. ಕೇಂದ್ರ ಯೋಗ ಮಂಡಳಿಯ ನಿರ್ದೇಶಕ ಡಾ. ಚಿದಾನಂದಮೂರ್ತಿ, ಜೋಧಪುರ ವಿಶ್ವವಿದ್ಯಾಲಯದ ಉಪ ಕುಲಪತಿ ಡಾ. ಲೋಕೇಶ್ ಶೇಖಾವತ್, ನೊಬೆಲ್ ಪ್ರಶಸ್ತಿಗೆ ನಾಮಾಂಕಿತ ಡಾ. ರಿಯೋ ರೆಬೆಲೋ, ಉದ್ಯಮಿ ದೇಶಬಂಧು ಗುಪ್ತಾ, ಪ್ರಶಾಂತಿ ಕುಟೀರದ ನಿರ್ದೇಶಕ ಡಾ. ಎಚ್.ಆರ್. ನಾಗೇಂದ್ರ ಮೊದಲಾದ ಗಣ್ಯರು ಸಮಾರಂಭದಲ್ಲಿ ಉಪಸ್ಥಿತರಿದ್ದರು.

ಸಮ್ಮೇಳನದ ಸಮಾರೋಪ ಡಿ.೩೦ರ ಸಂಜೆ ನಡೆಯಿತು. ಕರ್ನಾಟಕ ವಿಧಾನ ಸಭೆಯ ಸಭಾಪತಿ ಜಗದೀಶ ಶೆಟ್ಟರ್, ನ್ಯಾಶನಲ್ ಲಾ ಕಾಲೇಜಿನ ಉಪಕುಲಪತಿ ಡಾ. ಜಯಗೋವಿಂದ ಮೊದಲಾದ ಗಣ್ಯರು ಉಪಸ್ಥಿತರಿದ್ದರು.

ಸಮ್ಮೇಳನ ಯಶಸ್ವಿಯಾಯಿತು ಮತ್ತು ತೆರೆಯಲಾಗಿದ್ದ ಗವ್ಯೋತ್ಪನ್ನ ಮಳಿಗೆಗಳಲ್ಲಿ ಒಳ್ಳೆಯ ವ್ಯಾಪಾರವಾಯಿತು.

ಉದ್ಘಾಟನಾ ಸಮಾರಂಭದಲ್ಲಿ ಗಣ್ಯರ ನುಡಿ...

**ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ :** ಗೋವಿನ ಅಳಿವು-ಉಳಿವಿನ ಮೇಲೆ ನಮ್ಮಗಳ ಮುಂದಿನ ಬದುಕು ನಿಂತಿದೆ. ಗೋವು ಅನಂತ ಸುಂದರ, ಸಂಪದ್ಭರಿತವಾಗಿದ್ದರೂ ಅತ್ಯಂತ ಸಂಕಟಪಡುತ್ತಿದೆ. ಆದ್ದರಿಂದ ಇಡೀ ವಿಶ್ವವೇ ಸಂಕಟಪಡುವಂತೆ ಆಗುತ್ತಿದೆ. ಹಾಗಾಗದಿರಲು ಭಾವ ಪರವಶ ಸಂತ ಮಂಡಲದ ಮಾರ್ಗದರ್ಶನದ ಅಡಿಯಲ್ಲಿ ರಚನಾತ್ಮಕ ಕೈಗಾರಿಕಾ ಉದ್ಯಮಿಗಳು ಮುನ್ನಡೆಯಬೇಕು. ಅವರನ್ನು ಬುದ್ಧಿಜೀವಿಗಳು ಪರಸ್ಪರ ಬೆಸೆಯಬೇಕು. ಹಾಗಾಗಲು ಇಂತಹ ಸಮ್ಮೇಳನಗಳು ಸೇತುವೆಯಾಗಬೇಕು.

**ಡಾ. ಚಿದಾನಂದಮೂರ್ತಿ :** ಗಾಂಧಿಯ ಮಾತನ್ನು ಉದ್ಧರಿಸಿದರು.

ಪಶ್ಚಿಮದ ಅನುಕರಣೆ ಮತ್ತು ಔಷಧಿಯ ಗೀಳು ಎರಡೂ ಬೇಡ.

**ಡಾ. ಲೋಕೇಶ್ ಶೇಖಾವತ್ :** ಮೆಕಾಲೆ ಶಿಕ್ಷಣದ ಉತ್ಪನ್ನವಾದ ನಾನು ಏನನ್ನೂ ಮಾತನಾಡಲಾಗುವುದಿಲ್ಲ.

**ರಿಯೋ ರೆಬೆಲೋ :** ಗೋಮೂತ್ರವನ್ನು ಕಂಡು ಹೆಚ್ಚಿನವರು ಅಸಹ್ಯ ಪಡುತ್ತಾರೆ. ಆದರೆ, ಜಪಾನೀಯರು ರೋಗ ನಿರೋಧಕ ಶಕ್ತಿಯನ್ನು ವೃದ್ಧಿಗೊಳಿಸಿಕೊಳ್ಳಲು ತಮ್ಮ ಮೂತ್ರವನ್ನು ತಾವೇ ಕುಡಿಯುತ್ತಾರೆ. ಅದಕ್ಕಿಂತ ಹೆಚ್ಚಿಗೆ ಸಹ್ಯ ಮತ್ತು ಪ್ರಯೋಜನಕಾರಿ ಗೋಮೂತ್ರದ



ಬಗೆಗೆ ಜುಗುಪ್ಸೆ ಏಕೆ?

**ದೇಶಬಂಧು ಗುಪ್ತಾ :** ಜಗತ್ತಿನ ಔಷಧ ಉದ್ಯಮ ೮೦೦ ಬಿಲಿಯನ್ ಡಾಲರ್‌ನಷ್ಟಿದೆ. ಔಷಧೀಯ ಖನಿಯಾಗಿರುವ ಗವ್ಯೋತ್ಪನ್ನಗಳಿಗೆ ಅದರಲ್ಲಿ ಪ್ರತಿಶತ ಒಂದರಷ್ಟು (೩೫,೦೦೦ ಕೋಟಿ ರೂಪಾಯಿ) ಪಾಲು ಸಿಕ್ಕರೂ ಸಾಕು, ರೈತ ಸಬಲನಾಗುತ್ತಾನೆ.

**ಡಾ. ಎಚ್.ಆರ್. ನಾಗೇಂದ್ರ :** ಗೋವು ನಮ್ಮ ಸಂಸ್ಕೃತಿಯ ಮುಖ. ಗೋವಿನಿಂದಾಗಿ ಗ್ರಾಮ ಪುನರ್ನಿರ್ಮಾಣ ಸಾಧ್ಯ. ಗೋವು ಭಾರತದ ಭವ್ಯ ವೈಭವವನ್ನು ಪುನಃ ಸಂಸ್ಥಾಪಿಸುವುದರಲ್ಲಿ ಸಂಶಯವಿಲ್ಲ. ಬರುವ ವಿಜಯದಶಮಿಯಿಂದ ಭಾರತದ ಉದ್ದಗಲಗಳಲ್ಲಿ ಪ್ರವಹಿಸುವ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ ನಮ್ಮ ನಾಡನ್ನು ಒಗ್ಗೂಡಿಸುತ್ತದೆ, ಅಖಂಡವಾಗಿಸುತ್ತದೆ.

**ಕಾಸರಗೋಡಿನ ಕಿವ್ಸ್‌ನಲ್ಲಿರುವ ಡಾ. ಸತ್ಯಶಂಕರ ವರ್ಮುಡಿ ಅವರೊಂದಿಗೆ ಆಪ್ತ ಸಮಾಲೋಚನೆ...**

ಇವರು ೧೬೦೦ಕ್ಕೂ ಹೆಚ್ಚು ಮಂದಿ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಿದ್ದಾರೆ. ಮಣಿಪಾಲದ ಆಸ್ಪತ್ರೆಯಲ್ಲಿ ಕೈಬಿಟ್ಟ, ಕಡೆಯ ಹಂತದ ಕ್ಯಾನ್ಸರನ್ನೂ ಗುಣಪಡಿಸಿದ್ದಾರೆ. ಪ್ರಧಾನವಾಗಿ ಬಳಸಿದ್ದು ಗೋಮೂತ್ರ ಅರ್ಕ.

ಹೀಗೇ ಮಾತನಾಡುವಾಗ ವರ್ಮುಡಿಯವರು ನೀಡಿದ ಮಾಹಿತಿ: ಗೋಮೂತ್ರ ಅರ್ಕ ಕ್ಯಾನ್ಸರನ್ನು ಗುಣಪಡಿಸುವುದು ಹೌದು. ಅರ್ಕ ತೆಗೆದುಕೊಳ್ಳುವ ಮುಂಚೆ ತಪಾಸಣೆಯಾಗಬೇಕು. ಅಂದರೆ, ರಕ್ತದೊತ್ತಡ, ಸಕ್ಕರೆಯ ಪ್ರಮಾಣ, ಹೃದಯ–ಶ್ವಾಸಕೋಶ–ಪಿತ್ತಜನಕಾಂಗ–ಮೂತ್ರಕೋಶದ ಸ್ಥಿತಿಗತಿ ಇತ್ಯಾದಿ. ಆ ತಪಾಸಣೆಯ ಫಲಿತಾಂಶದ ಮೇರೆಗೆ ತೆಗೆದುಕೊಳ್ಳುವ ಅರ್ಕದ ಗುಣ, ಪ್ರಮಾಣ ನಿಗದಿಯಾಗುತ್ತದೆ. ಅದಿಲ್ಲದೇ ಸುಮ್ಮನೇ ಕುರುಡು–ಕುರುಡಾಗಿ ಅರ್ಕ ಕುಡಿದರೆ ನೀರು ಕುಡಿದುದಕ್ಕಿಂತ ಹೆಚ್ಚಿನ ಪ್ರಯೋಜನವೇನೂ ಆಗುವುದಿಲ್ಲ.

ಸೂಚನೆ: ಸಮ್ಮೇಳನದ ಸ್ಮರಣ ಸಂಚಿಕೆ (ಮಂಡಿಸಲಾದ ಪ್ರಬಂಧಗಳ ಸಾರ ಸಂಗ್ರಹ) ಮತ್ತು ವೀಡಿಯೋ ಚಿತ್ರಣದ ಡಿವಿಡಿಯನ್ನು ಬಿಡುಗಡೆ ಮಾಡಿರುತ್ತಾರೆ.

**ಸಂಪರ್ಕಿಸಿ :** ವಿವೇಕಾನಂದ ಯೋಗ ಅನುಸಂಧಾನ ಸಂಸ್ಥಾನ, ಏಕನಾಥ ಭವನ, ಗವಿಪುರಂ, ಕೆಂಪೇಗೌಡ ನಗರ, ಬೆಂಗಳೂರು; ೦೮೦–೨೬೬೧೨೬೬೯; svyasa@svyasa.org

**ವರದಿ: ಭಾರತೀಶ**

(3ನೆಯ ಪುಟದಿಂದ)

## ವೇಚೂರ್

ವಿಷಯುಕ್ತ ಹಾಲು ಸುರಿಸುವ ವಿದೇಶಿ ತಳಿಗಳಿಗೆ ಕೆಂಪುಹಾಸಿನ ಸ್ವಾಗತ ಕೋರಲಾಯಿತು. ವಿದೇಶಿ ತಳಿಗಳ ಮೂಲಕ ಹೊಸ ಹೊಸ ಕಾಯಿಲೆ ಬಂದಿತೆ ವಿನಹ ಬಡರೈತನಿಗೆ ಈ ಖಾಯಿದೆಯಿಂದ ಮೂರುಕಾಸಿನ ಉಪಯೋಗವೂ ಆಗಲಿಲ್ಲ; ಕಾರಣ ಖಾಯಿದೆಯ ಮೂಲ ಮನುಷ್ಯನ ಸ್ವಾರ್ಥದ ಖಾಯಿಲೆಯಷ್ಟೆ? ಅದೃಷ್ಟವಶಾತ್ ಆ ಖಾಯಿದೆಯಿಂದ ದೇವಸ್ಥಾನದ ಹೋರಿಗಳನ್ನು ಹೊರಗಿಡಲಾಗಿತ್ತು. ಹಾಗೆ ಉಳಿದುಕೊಂಡ ವೈಕಂನ ಶಿವ ದೇವಾಲಯದ ಹೋರಿಗಳೇ ಇಂದು ವೇಚೂರ್ ತಳಿ ಸಂಪೂರ್ಣ ನಾಶವಾಗದಂತೆ ಉಳಿಸುವಲ್ಲಿ ಮಹತ್ತರ ಪಾತ್ರವಹಿಸುವಂತಾಯಿತು.

ತಡವಾಗಿಯಾದರೂ ಎಚ್ಚರವಾದದ್ದು ಕೇರಳ ಕೃಷಿ ವಿಶ್ವವಿದ್ಯಾನಿಲಯಕ್ಕೆ. ವಿವಿಯ ಹೈನುಗಾರಿಕೆ ವಿಭಾಗದ ಡಾ॥ ಸೋಸಮ್ಮ ಲೈಪೆ ವೇಚೂರ್ ತಳಿ ಸಂರಕ್ಷಿಸುವಲ್ಲಿ ಒಂದು ಅಭಿಯಾನವನ್ನೇ ಕೈಗೊಂಡಿದ್ದಾರೆ. Vechur conservation trust (www.vechur.org)ನ ಮೂಲಕ ಜಗತ್ತಿನ ಗಮನವನ್ನು ವೆಚೂರಿನತ್ತ ಸೆಳೆಯಲು ಯಶಸ್ವಿಯಾಗಿದ್ದಾರೆ ಕೂಡ.

ಸಹಸ್ರ ಸಹಸ್ರ ಸಂಖ್ಯೆಯಲ್ಲಿದ್ದ ವೇಚೂರ್ ತಳಿಗಳ ಇಂದಿನ



ಸಂಖ್ಯೆ ಕೇವಲ ೮೦–೧೦೦, ಅಷ್ಟೆ! ಇದರೊಂದಿಗೆ ವೇಚೂರ್ ತಳಿಗಳ ಹಾಲಿನ ಅಪೂರ್ವವಾದ ಔಶಧೀಯ ಗುಣಗಳು ಹಾಗು ಅವುಗಳ ಬಳಕೆಯ ಕುರಿತಾದ ಮಾಹಿತಿಗಳೂ ಸಹ ಮರೆವಿನ ಪರದೆಯ ಹಿಂದೆ ಸರಿದಿವೆ. ಭಾರತೀಯರ ಸ್ವಾಭಿಮಾನಹೀನತೆಗೆ, ವಿದೇಶಿಮೋಹಕ್ಕೆ ಔಷಧಿ ಎಲ್ಲಿ ಅಡಗಿದೆಯೋ?

**– ಮಧುಕೇಶ ದೊಡ್ಡೇರಿ**

# ಸುದ್ದಿ ಸಮಾಚಾರ

**ಭೂಮಾತೆ ಮತ್ತು ಗೋಮಾತೆ ನಮಗೆ ಅತಿ ಮುಖ್ಯ. ಗೋಮಾತೆಯ ಬಗ್ಗೆ ಅರಿವು ಮೂಡಿಸುವ ದಿಸೆಯಲ್ಲಿ ಗೋವಿಶ್ವ ಪ್ರಯತ್ನಿಸುತ್ತಿದೆ. ಜಗತ್ತಿನ ಮೂಲೆ ಮೂಲೆಯಿಂದ ಗೋ ಸಂಬಂಧಿ ಸುದ್ದಿ ಸಮಾಚಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.**

## ಕೊಂಬು ಮೇಳ

ಸಂಕ್ರಾಂತಿ ಹಬ್ಬದ ಪ್ರಯುಕ್ತ ಬೆಂಗಳೂರಿನಲ್ಲಿ ಒಂದು ವಿಶಿಷ್ಟ ಕಾರ್ಯಕ್ರಮ ನಡೆಯಿತು. ಅದುವೇ ಜಾನುವಾರುಗಳ ಕೊಂಬುಮೇಳ. ಗೋವುಗಳನ್ನು ಶೃಂಗರಿಸಿ ಅವುಗಳ ಫ್ಯಾಶನ್ ಶೋ ನಡೆಸಿದ್ದೇ ಇದರ ವೈಶಿಷ್ಟ್ಯ. ಬೆಂಗಳೂರಿನ ಇಸ್ಕಾನ್ ಮತ್ತು ರೇಡಿಯೋ ಮಿರ್ಚಿ ಸಹಯೋಗದಲ್ಲಿ ನಡೆಸಿದ ಕೊಂಬುಮೇಳ ವಿಶಿಷ್ಟವೆನಿಸಿತು. ಇದರಲ್ಲಿ ಗ್ರಾಮೀಣ ಹಬ್ಬಕ್ಕೆ ನಗರದ ಮೆರುಗು ನೀಡಲಾಯಿತು. ನಗರಗಳಲ್ಲಿ ಫ್ಯಾಶನ್ ಶೋ ನಡೆಯುವುದು ತಿಳಿದಿರುವ ವಿಷಯ. ಕೊಂಬುಮೇಳದಲ್ಲಿ ನಡೆದುದು ಮಾತ್ರ ಮಹಿಳೆಯ ಫ್ಯಾಶನ್ ಶೋ ಅಲ್ಲ. ಅದು ಗೋವುಗಳ ಫ್ಯಾಶನ್ ಶೋ.



ಇಸ್ಕಾನ್‌ನ ರಂಗಮಂದಿರದಲ್ಲಿ ಗೋವುಗಳ ರ್‍ಯಾಂಪ್ ಶೋ ನಡೆಯಿತು. ಸರ್ವಾಲಂಕಾರ ಭೂಷಿತೆಯರಾದ ಗೋವುಗಳು ಮಂದಗಮನೆಯರಾಗಿ ನಡೆಯುತ್ತ ತಮ್ಮ ಸೌಂದರ್ಯ ಪ್ರದರ್ಶನ ಮಾಡಿದವು. ಗೋವುಗಳು ನಿಧಾನವಾಗಿ ನಡೆಯುತ್ತ ಬರುತ್ತಿದ್ದಂತೆ ನೆರೆದಿದ್ದ ಜನಸ್ತೋಮ ಘೋಷಗಳಿಂದ ಅವುಗಳನ್ನು ಉತ್ತೇಜಿಸುತ್ತಿದ್ದರು. ಕಾರ್ಯಕ್ರಮದಲ್ಲಿ ೨೦ಕ್ಕಿಂತಲೂ ಹೆಚ್ಚು ಗೋವುಗಳು ಪಾಲ್ಗೊಂಡಿದ್ದವು.

ಗೋವುಗಳ ಶೃಂಗಾರದಲ್ಲೂ ವೈವಿಧ್ಯ ಕಂಡುಬರುತ್ತಿತ್ತು. ಕೆಲವು ಗೋವುಗಳನ್ನು ಮದುವಣಗಿತ್ತಿಯಂತೆ ಸಿಂಗರಿಸಲಾಗಿತ್ತು. ಇನ್ನು ಕೆಲವನ್ನು ಹೂವುಗಳಿಂದ ಮತ್ತೆ ಕೆಲವನ್ನು ಹಸಿರೆಲೆಗಳಿಂದ ಶೃಂಗರಿಸಲಾಗಿತ್ತು. ಗೋವುಗಳು ಧರಿಸಿದ್ದ ಬಟ್ಟೆಗಳಲ್ಲೂ



ವೈವಿಧ್ಯವಿದ್ದವು. ಕೆಲವು ರೇಶ್ಮೆಯಿಂದ ಸಿಂಗಾರಗಂಡಿದ್ದರೆ ಇನ್ನು ಕೆಲವು ಕೆಂಪು ವರ್ಣದ ಮದುವೆ ಬಟ್ಟೆಯಿಂದ ಮತ್ತಿನ್ನು ಕೆಲವು ಹೂವಿನಿಂದ ಸಿಂಗರಿಸಿಕೊಂಡಿದ್ದವು.

ಸುಮ್ಮನೆ ಮೋಡೆಲ್‌ಗಳಂತೆ ಬೆಕ್ಕಿನ ನಡೆ ಮಾಡಿ ವಾಪಾಸಾದವೆಂದುಕೊಳ್ಳಬೇಡಿ. ಗೋವುಗಳಿಗೂ ಫ್ಯಾಶನ್ ಪ್ರಶಸ್ತಿ ನೀಡಲಾಯಿತು. ಪ್ರಶಸ್ತಿಗಳ ಹೆಸರಿನಲ್ಲೂ ಭಾರತೀಯತೆ ಎದ್ದು ಕಾಣುತ್ತಿತ್ತು. ಗೆದ್ದ ಗೋವುಗಳಿಗೆ ಮಿಸ್ ಪುಣ್ಯಕೋಟಿ, ಮಿಸ್ ನಂದಿನಿ ಮತ್ತು ಮಿಸ್ ಸುರಭಿ ಎಂಬ ಅಭಿದಾನ ಮಾಡಲಾಯಿತು.

ಗೋಹತ್ಯೆ ಬೇಡ ಎಂಬ ಸಂದೇಶವನ್ನೂ ಜನತೆಗೆ ನೀಡಲಾಯಿತು.

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ ೨೭, ೨೦೦೭ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ-ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು ಹದಿನಾರನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ-ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com